ಅವರ ಸಂಸ್ಕೃತಿ, ಪರಂಪರೆ, ಕಲೆಯ ಸಂಪೂರ್ಣ ಪರಿಚಯವಾಗುತ್ತದೆ.

ಕೋಯಾ, ನಾಯಕ್ ಪೋಡ್, ಕೊಂಡರೆಡ್ಡಿ, ಲಂಬಡಾ, ಗೊಂಡ ಇವೇ ಆಂಧ್ರಪ್ರದೇಶ ಮತ್ತು ತೆಲಂಗಾಣದ ಮುಖ್ಯವಾದ ಬುಡಕಟ್ಟು ಜನಾಂಗಗಳು. ಇಲ್ಲಿನ ಬುಡಕಟ್ಟು ಸಂಸ್ಕೃತಿ ಶ್ರೀಮಂತವಾದದ್ದು, ವಿಶಿಷ್ಟವಾದದ್ದು. ಆಧುನಿಕತೆಯ ಗೌಜಿನಲ್ಲಿ, ಅತ್ಯಂತ ವೇಗವಾಗಿ ಬದಲಾಗುತ್ತಿರುವ ಸಮಾಜದಲ್ಲಿ ಮೂಲದ ಸೊಗಡು ಕಳೆದುಹೋಗುತ್ತಿರಬೇಕಾದರೆ ಇಂತಹ ಮ್ಯೂಸಿಯಂಗಳು ಖಂಡಿತವಾಗಿ ಈಗಿನ ಮತ್ತು ಮುಂದಿನ ಪೀಳಿಗೆಗೆ ಆದಿವಾಸಿ, ಬುಡಕಟ್ಟಿನವರ ಜನಜೀವನ, ಸಂಸ್ಕೃತಿಯನ್ನು ಪರಿಚಯಿಸುವ ಮಾಧ್ಯಮವಾಗುತ್ತವೆ.



ಪೂಜೆಗಿಡುತ್ತಿದ್ದ ಮಣ್ಣಿನ ಬೊಂಬೆ

ತೆಲಂಗಾಣದ ಕೊಥಗುಡೆಮ್ ಜಿಲ್ಲೆಯಲ್ಲಿರುವ ಈ ಮ್ಯೂಸಿಯಮ್ಮನ್ನು ಪುನರ್ವಿನ್ಯಾಸಗೊಳಿಸಿ, ಇತ್ತೀಚೆಗೆ, ಅಂದರೆ ಏಪ್ರಿಲ್ 2025ರಲ್ಲಿ ಉದ್ಘಾಟಿಸಿ ಸಾರ್ವಜನಿಕರಿಗೆ ತೆರೆಯಲಾಯಿತು. ಇದರ ಉಸ್ತುವಾರಿ ಇಂಟಿಗ್ರೇಟಡ್ ಟ್ರೈಬಲ್ ಡೆವಲಪ್‌ಮೆಂಟ್ ಏಜನ್ಸಿಯವರದ್ದು.

ಬೇಟೆ (ಹಂಟಿಂಗ್) ವಿಭಾಗದಲ್ಲಿ ಬುಡಕಟ್ಟು ಜನಾಂಗದವರು ಬಳಸುತ್ತಿದ್ದ ಬಿಲ್ಲುಬಾಣ, ಕುಡುಗೋಲು, ಹಲವು ವಿಧದ ಕತ್ತಿಗಳು, ಕೊಡಲಿಗಳ ಪ್ರದರ್ಶನವಿದೆ. ಜೀವನಶೈಲಿ (ಲೈಫ್‌ಸ್ಟೈಲ್) ವಿಭಾಗದಲ್ಲಿ ನೀರು, ಕಳ್ಳು, ಮಜ್ಜಿಗೆ ಮುಂತಾದವುಗಳನ್ನಿಡುವ ವಿವಿಧ ಆಕಾರದ ಪಾತ್ರೆಗಳನ್ನು ನೋಡಬಹುದು. ಇವುಗಳನ್ನು ಕುಂಬಳಕಾಯಿ, ಸೋರೆಕಾಯಿಯಿಂದ ಮಾಡಿರುವುದು ವಿಶೇಷ. ಹುರಿ ಹಗ್ಗದಿಂದ ಮಾಡಿದ, ಮರ ಹತ್ತಲು ಉಪಯೋಗಿಸುವ ಸಾಧನ, ಮರದಿಂದ ಕಳ್ಳು ತೆಗೆಯಲು ಉಪಯೋಗಿಸುವ ವಸ್ತುಗಳೂ ಇಲ್ಲಿವೆ. ತಾಳೆ ಮರದ ಎಲೆಗಳಿಂದ ತಯಾರಿಸಿದ ಸೌಟು ಗಮನಸೆಳೆಯುತ್ತದೆ. ಮೀನು ಹಿಡಿಯಲು ಉಪಯೋಗಿಸುವ ವಿವಿಧ ಆಕಾರದ ಬುಟ್ಟಿಗಳು, ಬಲೆಗಳು ಸಹ



ಬಿದಿರು ಮತ್ತು ಮರದ ಕಾಂಡದಿಂದ ತಯಾರಾದ ಅಲಂಕಾರಿಕ ವಸ್ತುಗಳು

ಇವೆ. ಎಲ್ಲವನ್ನೂ ಕಾಡು ಪ್ರದೇಶದಲ್ಲಿ ಸುಲಭದಲ್ಲಿ ಸಿಗುವ ಬಿದಿರು, ಬಳ್ಳಿಗಳಿಂದ ತಯಾರಿಸಿದ್ದರು. ಬುಡಕಟ್ಟಿನ ಜನರು ಹೆಚ್ಚಾಗಿ ಅರಣ್ಯ ಪ್ರದೇಶಗಳಲ್ಲಿ, ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದು, ಮೀನು ಹಿಡಿಯುವುದು, ಬೇಟೆ, ಬೇಸಾಯ, ಅರಣ್ಯ ಉತ್ಪಾದನೆಗಳ ಶೇಖರಣೆಯೇ ಮುಖ್ಯ ಕಸುಬಾಗಿತ್ತು. ಅವುಗಳನ್ನೇ ಇಲ್ಲಿ ಪ್ರದರ್ಶನಕ್ಕಿಡಲಾಗಿದೆ.

ಇದರೊಂದಿಗೆ, ಮರದ ಕಾಂಡಗಳಲ್ಲಿ ಕೆತ್ತನೆ ಮಾಡಿದ ಶೋಪೀಸುಗಳು ಬಹಳ ಆಕರ್ಷಕವೆನಿಸಿದವು. ಸಂಸ್ಕೃತಿ ಮತ್ತು ಹಬ್ಬ (ಕಲ್ಚರ್ ಅಂಡ್ ಫೆಸ್ಟಿವಲ್) ವಿಭಾಗವೂ ಕುತೂಹಲ ಕೆರಳಿಸುತ್ತದೆ. ಪ್ರಕೃತಿ ಪೂಜೆ ಇವರ ನಂಬಿಕೆಯ ಭಾಗವಾಗಿದ್ದು, ಮರದ ಮುಖವಾಡ, ಕಲ್ಲು, ಮಣ್ಣಿನಿಂದ ಮಾಡಿದ ದೇವರು, ದೈವಗಳಿಗೆ ಅರಿಶಿನ ಕುಂಕುಮ ಹಚ್ಚಿ ಪೂಜಿಸುತ್ತಿದ್ದ ಆಚರಣೆಯ ವಿವರವನ್ನು ಮ್ಯೂಸಿಯಂನಲ್ಲಿ ನೋಡಬಹುದು. ಮಣ್ಣು ಮತ್ತು ಒಣಗಿದ ಹುಲ್ಲು, ಎಲೆಯಿಂದ ಮಾಡಿದ ಗುಡಿಸಲು, ಭತ್ತದ ತಿರಿ, ಎತ್ತಿನ ಗಾಡಿ, ಭತ್ತ ತುಂಬುವ ಬಿದಿರಿನ ದೊಡ್ಡ ಬುಟ್ಟಿ, ಬಿದಿರಿನ ತಕ್ಕಡಿ, ಮೊರ, ಟೋಪಿ ಎಲ್ಲವೂ ಪ್ರದರ್ಶನದ ಭಾಗವಾಗಿವೆ. ವಿವಿಧ ಆಕಾರದ ಚಂಡೆ, ತಮಟೆ, ಕೊಳಲು, ಕಹಳೆಯೂ ಪ್ರದರ್ಶನದಲ್ಲಿದೆ. ಜಿಂಕೆ, ಹಸು, ಎಮ್ಮೆಯ ಕೊಂಬುಗಳು, ಹಕ್ಕಿಯ ಗೂಡುಗಳು ಇಲ್ಲಿವೆ. ಒಣಗಿದ ಎಲೆ, ಬಿದಿರಿನಿಂದ ಮಾಡಿದ ಹಲವು ಗೃಹಾಲಂಕಾರದ ವಸ್ತುಗಳೂ ಇವೆ.

ಆಭರಣ ವಿಭಾಗದಲ್ಲಿ ಕಲ್ಲು, ಕಬ್ಬಿಣ, ಮರದಿಂದ ಮಾಡಿದ ಮಹಿಳೆಯರ ಬಳೆ, ತೋಳಬಂದಿ, ಸರ, ಕಾಲ್ಗೆಜ್ಜೆ, ಉಡುಪುಗಳ ಪ್ರದರ್ಶನವಿದೆ. ಸಾಂಪ್ರದಾಯಿಕ ಬುಡಕಟ್ಟು ಮನೆ, ಕೆಂಪು ರೆಡ್ ಆಕ್ಸೈಡ್ ನೆಲ, ಒಳಗೆ ಮಣ್ಣಿನ ಒಲೆ, ಮಣ್ಣಿನ ಪಾತ್ರೆ, ಬಿದಿರು ಬುಟ್ಟಿಗಳು, ತೊಟ್ಟಿಲು, ಇತರೆ ದಿನಬಳಕೆಯ ವಸ್ತುಗಳನ್ನು ಇಡಲಾಗಿದ್ದು, ಅದರೊಳಗೆ ಕಾಲಿಟ್ಟಾಗ ಅಕ್ಷರಶಃ ಅವರ ಜಗತ್ತಿಗೆ ಕಾಲಿಟ್ಟ ಅನುಭವವಾಗುತ್ತದೆ. ಹಾಗೆಯೇ ಬುಡಕಟ್ಟಿನವರ ಪಂಚಾಯಿತಿ ಕಟ್ಟೆ 'ರಚಬಂದ'ವನ್ನೂ ಇಲ್ಲಿ ನೋಡಬಹುದು.

ಬುಡಕಟ್ಟು ಜನಜೀವನದ ಮುಖ್ಯ ಘಟನೆಗಳಿಗೆ ಸಾಕ್ಷಿಯಾಗಿರುವ ಫೋಟೋಗಳ ಪ್ರದರ್ಶನವೂ ಇಲ್ಲಿದೆ. ಮ್ಯೂಸಿಯಮ್ಮಿನ ಮಧ್ಯದಲ್ಲಿ ವಾಲಿಬಾಲ್, ಬ್ಯಾಡ್ಮಿಂಟನ್, ಕ್ರಿಕೆಟ್ ಆಡಲು ಜಾಗ ಬಿಟ್ಟಿದ್ದಾರೆ. ಇಲ್ಲಿಗೆ ಸಂದರ್ಶಿಸುವ ಯುವ ಪೀಳಿಗೆಯನ್ನು ನಿರಾಶೆಗೊಳಿಸಬಾರದಲ್ಲ... ಅದಕ್ಕಾಗಿ ಮ್ಯೂಸಿಯಂ ಪಕ್ಕದಲ್ಲಿ ಸೆಲ್ಫಿ ಪಾಯಿಂಟ್, ಫುಡ್ ಕೋರ್ಟ್ ಇದೆ. ಬುಡಕಟ್ಟು ಜನರ ಆಹಾರವನ್ನು ಪರಿಚಯಿಸುವ, ಮಾರುವ ಸ್ಟಾಲುಗಳೂ ಅಲ್ಲಿವೆ. ನಾವು ರುಚಿ ನೋಡಲಾಗದೆ, ಮುಚ್ಚಿದ ಬಾಗಿಲನ್ನು ಮಾತ್ರ ನೋಡಿದೆವು. ರಾತ್ರಿಯ ಹೊತ್ತಿನಲ್ಲಿ ಆಕರ್ಷಕ ಲೈಟಿಂಗ್ ಸಹ ಇದೆ. ಮಕ್ಕಳಿಗೆ ಈ ಮ್ಯೂಸಿಯಂ ಜ್ಞಾನದ ಭಂಡಾರವಾಗಿದೆ. ಒಂದು ರೀತಿಯಲ್ಲಿ ಪಠ್ಯಪುಸ್ತಕವಿದ್ದಂತೆ.

**ಗೊಂಡ ಕಲೆ:** ಇದು ಗೊಂಡ ಬುಡಕಟ್ಟಿನವರ ವಿಶಿಷ್ಟ ಜಾನಪದ ಚಿತ್ರಕಲೆ. ಪ್ರಕೃತಿಯೊಡನೆ ಒಂದಾಗಿ ಬಾಳುವ ಇವರ ಚಿತ್ರಕಲೆಯಲ್ಲೂ ಮನುಷ್ಯ, ಮರ, ಗಿಡ, ಪ್ರಾಣಿ, ಪಕ್ಷಿಗಳೇ ಮುಖ್ಯವಾಗಿ ಕಂಡುಬರುತ್ತವೆ. ಅಲ್ಲದೆ ಜಾನಪದ, ಪುರಾಣ ಕತೆಗಳ ದೇವರ ಕತೆಗಳೂ ಇವರ ಚಿತ್ರಕಲೆಯಲ್ಲಿ ಅರಳುವುದಿದೆ. ಇವರು ಉಪಯೋಗಿಸುವ ಬಣ್ಣವೂ ಸಹಜ ಮತ್ತು ಪ್ರಕೃತಿಯಿಂದ ದೊರೆಯುವಂತಹದ್ದು. ಈಗ ಗೊಂಡ ಕಲೆ ವಿಶ್ವ ಪ್ರಸಿದ್ಧ. ಇಂತಹ ಗೊಂಡ ಚಿತ್ರಕಲೆಗಳೂ, ಇದರ ಬಗ್ಗೆ ವಿವರಣೆಯೂ ಇಲ್ಲಿದೆ. ಗೊಂಡ ಬುಡಕಟ್ಟಿನವರು ಮುಖ್ಯವಾಗಿ ಮಧ್ಯಪ್ರದೇಶದಲ್ಲಿದ್ದರೂ ಸಾಕಷ್ಟು ಜನರು ತೆಲಂಗಾಣದಲ್ಲೂ ಇದ್ದರಂತೆ.

**ನಾಯಕ್‌ಪಾಡ ಕಲೆ:** ನಾಯಕ್‌ಪಾಡ ಬುಡಕಟ್ಟಿನವರ ಜಾನಪದ ನಾಟಕಗಳಲ್ಲಿ ಮುಖವಾಡಗಳನ್ನು ಬಳಸುತ್ತಾರೆ. ಇದು ಮರದಿಂದ ಮಾಡಲಾಗಿದ್ದು ಕೆಂಪು, ಹಳದಿ, ಕಿತ್ತಳೆ ಮುಂತಾದ ಕಡುಬಣ್ಣಗಳನ್ನೇ ಉಪಯೋಗಿಸುತ್ತಾರೆ. ತೆಲಂಗಾಣದ ಹಳ್ಳಿಗಳಲ್ಲಿ ಇಂತಹ ನಾಟಕಗಳನ್ನು ಆಡುತ್ತಿದ್ದು, ಇದು ತೆಲಂಗಾಣದ ಸಂಸ್ಕೃತಿ ಮತ್ತು ಇತಿಹಾಸಕ್ಕೆ ಉದಾಹರಣೆಯಾಗಿದೆ. ಮುಖ್ಯವಾಗಿ ರಾಜ, ರಾಣಿ, ರಾಕ್ಷಸ, ಪ್ರಾಣಿಗಳ ಮುಖವಾಡಗಳಿದ್ದು, ಮುಖವಾಡದ ಮೇಲೆ ಮನುಷ್ಯರ ಭಾವನೆಗಳೂ ಸ್ಪಷ್ಟವಾಗಿ ಗೋಚರಿಸುತ್ತವೆ. ನಾಟಕಗಳಲ್ಲಿ 'ಕೆಟ್ಟದರ ವಿರುದ್ಧ ಒಳ್ಳೆಯದರ ಜಯ' –ಇದೇ ಮುಖ್ಯವಾದ ಥೀಮ್ ಆಗಿರುತ್ತದೆ. ಇಂತಹ ಮುಖವಾಡಗಳು ಮತ್ತು ಇದರ ಬಗ್ಗೆ ವಿವರಣೆಯನ್ನು ಇಲ್ಲಿ ನೋಡಬಹುದು.

**ಕೊರ್ರಾಜುಲ ಕೊಲುಪು:** ನಾಯಕ್‌ಪಾಡ ಜನಾಂಗದಲ್ಲಿ ಸಂಪ್ರದಾಯವೊಂದು ಸಾಕಷ್ಟು ಕುತೂಹಲ ಕೆರಳಿಸುತ್ತದೆ. ವಿಶೇಷ ದಿನ ಹಳ್ಳಿಯಲ್ಲಿ ಪೆಂಡಾಲ್ ಹಾಕಲಾಗುತ್ತದೆ. ಅಲ್ಲಿ ದೇವರ ಮೂರ್ತಿಗಳನ್ನಿಟ್ಟು ಪೂಜಿಸಲಾಗುತ್ತದೆ. ಕಾಡಿನಿಂದ ಮೂರು 'ಸಾಂಡ್ರ' ಎನ್ನುವ ಪವಿತ್ರ ಮರವನ್ನು ಬೇರು ಸಮೇತ ಕಿತ್ತು ತಂದು ಅಗ್ನಿಕುಂಡದಲ್ಲಿಟ್ಟು ಸುಡಲಾಗುತ್ತದೆ. ಭಕ್ತರು ದೇವರ ಮೂರ್ತಿಯನ್ನು ಹಿಡಿದುಕೊಂಡು, ಪ್ರಾರ್ಥನೆಯೊಂದಿಗೆ ಅಗ್ನಿಕುಂಡದಲ್ಲಿ ನಡೆಯುತ್ತಾರೆ. ಕೊನೆಯಲ್ಲಿ ದೇವರಿಗೆ ನೈವೇದ್ಯವಿಟ್ಟು ಪ್ರಸಾದವನ್ನು ಹಂಚಲಾಗುತ್ತದೆ.

ಇದು ಕೇವಲ ಮ್ಯೂಸಿಯಂ ಆಗಿರದೆ ಆದಿವಾಸಿ, ಬುಡಕಟ್ಟು ಜನಾಂಗದವರ ಪರಂಪರೆ, ಸಂಸ್ಕೃತಿಯ ಹೆಮ್ಮೆಯ ಪ್ರದರ್ಶನ. ತೆಲಂಗಾಣದ ಕಡೆಗೆ ಹೋದರೆ ನೀವೂ ಒಮ್ಮೆ ಭದ್ರಾಚಲಂಗೆ ಹೋಗಿ ಈ ಮ್ಯೂಸಿಯಂ ನೋಡಿ ಬನ್ನಿ...!